# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೦೯, ಜುಲೈ, ೨೦೨೪(ಆಷಾಢ, ೧೮ ಶಕವರ್ಷ, ೧೯೪೬)<br>BENGALURU, TUESDAY, 09, JULY, 2024(ASHADHA, 18, SHAKAVARSHA, 1946) | ನಂ. ೩೨೭<br>No. 327 |


## GOVERNMENT OF KARNATAKA

No:FD 1 PES 2024

Karnataka Government Secretariat
Vidhana Soudha,
Bengaluru, dated:09th July 2024

## NOTIFICATION

Whereas the draft of the following rules further to amend the Karnataka Excise (Sale of Indian & Foreign Liquors) Rules, 1968, was published as required by sub-section (1) of Section 71 of the Karnataka Excise Act, 1965 (Karnataka Act 21 of 1966) in Notification No: FD 1 PES 2024, dated: 01.06.2024 in Part-IVA of the Karnataka Gazette (Extraordinary) No.249 dated:01.06.2024 inviting objections and suggestions from all persons likely to be affected within thirty days from the date of its publication in the official Gazette.

And, whereas the said Gazette was made available to the public on 01.06.2024.

And, whereas no objections and suggestions were received in respect of the said draft by the State Government.

Now, therefore, in exercise of the powers conferred by Section 71 of the Karnataka Excise Act, 1965 (Karnataka Act 21 of 1966), the Government of Karnataka hereby makes the following rules, namely:-

## RULES

**1. Title and commencement: -** (1) These Rules may be called the Karnataka Excise (Sale of Indian & Foreign Liquors) (Amendment) Rules, 2024.

(2) They shall come into force from the date of their final publication in the official Gazette.

**2. <u>Amendment of Rule 3:-</u>** In the Karnataka Excise (Sale of Indian & Foreign Liquors) Rules, 1968, in rule 3, in sub-rule (4), after the third proviso, the following provisos shall be inserted, namely:-

"Provided also that, new licences granted in Form CL-4 in a place having not less than 10,000 sq. feet built-up area in City Corporations having a population of more than 20 lakhs, shall have any of the facilities specified in condition number 3 of first proviso, i.e., either outdoor games or indoor games or both:

Provided also that, existing licences in Form CL-4 in a place having not less than 10,000 sq. feet built-up area in City Corporations having a population of more than 20 lakhs, and having any of the facilities specified in condition number 3 of first proviso, i.e., either outdoor games or indoor games or both, shall also be allowed to be renewed".

By Order and in the name
of the Governor of Karnataka

(Manjula Nataraj)
Under Secretary to Government,
Finance Department (Excise)

**<u>ಕರ್ನಾಟಕ ಸರ್ಕಾರ</u>**

ಸಂಖ್ಯೆ: ಆಇ 1 ಪಿಇಎಸ್ 2024

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ:09ನೇ ಜುಲೈ 2024

**<u>ಅಧಿಸೂಚನೆ</u>**

ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ಅನ್ನು ತಿದ್ದುಪಡಿ ಮಾಡುವ ಕರಡನ್ನು, ಕರ್ನಾಟಕ ಅಬಕಾರಿ ಅಧಿನಿಯಮ, 1965 (1966ರ ಕರ್ನಾಟಕ ಅಧಿನಿಯಮ ಸಂಖ್ಯೆ 21)ರ 71ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಅಧಿಸೂಚನೆ ಸಂಖ್ಯೆ: ಆಇ 1 ಪಿಇಎಸ್ 2024ರ ದಿನಾಂಕ:01.06.2024ನ್ನು ಕರ್ನಾಟಕ ರಾಜ್ಯಪತ್ರ ಭಾಗ-IVಎ ಸಂಖ್ಯೆ:249, ದಿನಾಂಕ:01.06.2024ರಲ್ಲಿ ಅವುಗಳನ್ನು ಪ್ರಕಟಿಸಿದ ಮೂವತ್ತು ದಿನಗಳೊಳಗಾಗಿ, ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ.

ಮತ್ತು, ಸದರಿ ರಾಜ್ಯಪತ್ರವನ್ನು ದಿನಾಂಕ:01.06.2024 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ.

ಮತ್ತು, ಸದರಿ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಸ್ವೀಕರಿಸಿಲ್ಲದಿರುವುದರಿಂದ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



ಈಗ, ಆದ್ದರಿಂದ, ಕರ್ನಾಟಕ ಅಬಕಾರಿ ಅಧಿನಿಯಮ, 1965 (1966ರ ಕರ್ನಾಟಕ ಅಧಿನಿಯಮ ಸಂಖ್ಯೆ 21)ರ 71ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

## ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯಗಳ ಮಾರಾಟ) (ತಿದ್ದುಪಡಿ) ನಿಯಮಗಳು, 2024 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ ಅವುಗಳನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 3ನೇ ನಿಯಮದ ತಿದ್ದುಪಡಿ:–** ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968ರ 3ನೇ ನಿಯಮದ ಉಪ–ನಿಯಮ (4)ರ 3ನೇ ಪರಂತುಕದ ತರುವಾಯ, ಈ ಮುಂದಿನ ಪರಂತುಕಗಳನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಅಲ್ಲದೆ, 20 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಮಹಾನಗರ ಪಾಲಿಕೆಯ ಮಿತಿಯೊಳಗೆ 10,000 ಚದರ ಅಡಿಗಿಂತ ಕಡಿಮೆಯಿಲ್ಲದ ಸ್ಥಳದಲ್ಲಿ ನಮೂನೆ CL-4 ನಲ್ಲಿ ಮಂಜೂರು ಮಾಡಿರುವ ಸನ್ನದುಗಳು ಮೊದಲ ಪರಂತುಕದ ಷರತ್ತು ಸಂಖ್ಯೆ (3)ರಲ್ಲಿ ನಿರ್ದಿಷ್ಟಪಡಿಸಿರುವ ಯಾವುದಾದರೂ ಸೌಲಭ್ಯಗಳನ್ನು ಹೊಂದಿರಬೇಕು, ಅಂದರೆ, ಹೊರಾಂಗಣ ಕ್ರೀಡೆಗಳು ಅಥವಾ ಒಳಾಂಗಣ ಕ್ರೀಡೆಗಳು ಅಥವಾ ಎರಡೂ:

ಮತ್ತು ಅಲ್ಲದೆ, ಮೊದಲ ಪರಂತುಕದ ಷರತ್ತು ಸಂಖ್ಯೆ (3) ರಲ್ಲಿ ನಿರ್ದಿಷ್ಟಪಡಿಸಿರುವ ಯಾವುದಾದರೂ ಸೌಲಭ್ಯಗಳನ್ನು, ಅಂದರೆ, ಹೊರಾಂಗಣ ಕ್ರೀಡೆಗಳು ಅಥವಾ ಒಳಾಂಗಣ ಕ್ರೀಡೆಗಳು ಅಥವಾ ಎರಡನ್ನೂ ಹೊಂದಿ, 20 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಮಹಾನಗರ ಪಾಲಿಕೆಯ ಮಿತಿಯೊಳಗೆ 10,000 ಚದರ ಅಡಿಗಿಂತ ಕಡಿಮೆಯಿಲ್ಲದ ಸ್ಥಳದಲ್ಲಿ ಅಸ್ತಿತ್ವದಲ್ಲಿರುವ ನಮೂನೆ CL-4 ನಲ್ಲಿನ ಸನ್ನದುಗಳನ್ನು ನವೀಕರಿಸಲು ಸಹ ಅನುಮತಿಸಲಾಗುತ್ತದೆ".

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
(ಮಂಜುಳಾ ನಟರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH